**ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹುಕ್ಕೇರಿ**

**ಸಿಸಿ ನಂ ಃ 978/2020**
**ಸಿಡಬ್ಲು ಃ 2**
**ಪಿಡಬ್ಲು ಃ 2**

**ಹೆಸರು** ಃ ಭೀಮಪ್ಪ ಮಗದುಮ
**ವಯಾ** ಃ 45 ವರ್ಷ
**ಉದ್ಯೋಗ** ಃ ಒಕ್ಕಲುತನ
**ವಾಸ** ಃ ಝುಂಗಟಿಹಾಳ ತಾಃ ಹುಕ್ಕೇರಿ

**(ದಿನಾಂಕಃ 09-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋದಿಸಲಾಯಿತು)**

**ಮುಖ್ಯ ವಿಚಾರಣೆ : ಸಸಅಃರವರಿಂದ ಸರಕಾರದ ಪರವಾಗಿ ಃ**

ಸುಮಾರು 4-5 ವರ್ಷಗಳ ಹಿಂದೆ ಮಧ್ಯಾಹ್ನ 12-30 ಗಂಟೆಗೆ ಪೋಲಿಸರು ನನ್ನನ್ನು ಮತ್ತು ಚಾಸಾ-3 ಮಹಾನಿಂಗ ನಾಯಕ ಇವರನ್ನು ಪಂಚನಾಮೆ ಮಾಡಲು ಗುಡಸ ಗ್ರಾಮದ ಹುಕ್ಕೇರಿ ಘಟಪ್ರಭಾ ರಸ್ತೆಯಲ್ಲಿ ಕರೆಸಿದ್ದರು. ಅಲ್ಲಿ ಒಂದು ಕ್ರೂಜರ ಹಾಗೂ ಬಸ್ಸಿಗೆ ಅಪಘಾತ ಆಗಿದೆ ಎಂದು ಹೇಳಿದರು. ನಾವು ಅಲ್ಲಿಗೆ ಹೋದಾಗ ಕ್ರೂಜರ ಗಾಡಿ ಇತ್ತು ಹಾಗೂ ಅದು ನುಜ್ಜು ಆಗಿತ್ತು . ಅಲ್ಲಿ ನಾವು ಪಂಚರಾಗಿ ಹಾಜರ ಇದ್ದು, ಅಲ್ಲಿ ಆದ ಪಂಚನಾಮೆಗೆ ಸಾಕ್ಷಿಯಾಗಿ ಸಹಿ ಹಾಕಿರುತ್ತೇವೆ. ಅಲ್ಲಿ ನಮ್ಮ ಫೋಟೊ ಮತ್ತು ಪಂಚನಾಮೆಯನ್ನು ಮಾಡಿದರು. ಅಪಘಾತದ ಜಾಗವನ್ನು ಚಾಸಾ-1 ಲಗಮಪ್ಪಾರವರು ತೋರಿಸಿದರು.

ಸದರಿ ಪಂಚನಾಮೆ ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿ.ಪಿ-2 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿ.ಪಿ-2(ಬಿ) ಎಂದು ಗುರುತಿಸಲಾಯಿತು. ಅಂದು ಮಾಡಿದ ಕಚ್ಚಾ ನಕಾಶೆ ನೋಡುತ್ತಿದ್ದು ಅದನ್ನು ಈಗಾಗಲೇ ನಿ.ಪಿ-3 ಎಂದು ಗುರುತಿಸಲಾಗಿದ್ದು ಸಾಕ್ಷಿ ಸಹಿಯನ್ನು ನಿ.ಪಿ-3(ಬಿ) ಎಂದು ಗುರುತಿಸಲಾಯಿತು. ಅಂದು ತೆಗೆದ ಫೋಟೊ ಸಾಕ್ಷಿ ನೋಡಿ ಗುರುತಿಸಿದ್ದು ಅದು ಈಗಾಗಲೇ ನಿ.ಪಿ-4 ಎಂದು ಗುರುತಿಸಲಾಗಿದೆ.

ನಂತರ ಪೋಲಿಸರು ನಮ್ಮನ್ನು ಪೋಲಿಸ ಠಾಣೆಗೆ ಕರೆದುಕೊಂಡು ಬಂದರು. ಅಲ್ಲಿ ಅಪಘಾತಕ್ಕೀಡಾದ 2 ವಾಹನಗಳನ್ನು ನಮ್ಮ ಸಮಕ್ಷಮ ಪಂಚನಾಮೆ ಮಾಡಿ ಫೋಟೊ ತೆಗೆದರು. ಅಂದು ಮಾಡಿದಂತಹ ವಾಹನ ತಡೆ ಪಂಚನಾಮೆ ನೋಡುತ್ತಿದ್ದು ಅದನ್ನು ಈಗಾಗಲೇ ನಿ.ಪಿ-5 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿ.ಪಿ-5(ಬಿ) ಎಂದು ಗುರುತಿಸಲಾಯಿತು. ಅಪಘಾತಕ್ಕೀಡಾದ ವಾಹನಗಳ ಫೋಟೊ ನೋಡುತ್ತಿದ್ದು ಅವುಗಳನ್ನು ಈಗಾಗಲೇ ನಿ.ಪಿ-6 ರಿಂದ 13 ಎಂದು ಗುರುತಿಸಲಾಯಿತು.

**ಪಾಟಿ ಸವಾಲುಃ** ಶ್ರೀ ಎ ಬಿ ಟಿ ಆರೋಪಿ ಪರ ವಕೀಲರಿಂದ -

ಏನೂ ಇಲ್ಲ ಎಂದು ಹೇಳುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೆ ಕೇ ಸರಿ ಅದೇ**

( ಆದಿತ್ಯ ಆರ್ ಕಲಾಲ್ )

**ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ**